ಶ್ರೀ ಕೆ. ವಸಂತ ಬಂಗೇರ. —ಎಲ್ಲಿಗೆ ಎಷ್ಟು ಜನ ಪ್ರವಾಸಿಗರು ಬರುತ್ತಾರೆಂಬ ಬಗ್ಗೆ ತಾಪ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ತರಿಸಬಹುದು. ಅವಕ್ಕೆ ಬೇಕಾದ ಮನವಿಯನ್ನು ಸಚಿವರಿಗೆ ಕೊಡುತ್ತೇನೆ. ಮುಂದಿನ ವರ್ಷದಲ್ಲಾದರೂ ನನ್ನ ಮನವಿಯಂತೆ ಕ್ರಮ ಕೈಗೊಳ್ಳಿ ರೀರಾ ?

ಶ್ರೀ ಎಂ. ಪಿ. ಪ್ರಕಾಶ್. —ಮನವಿ ಬರಲಿ. ಈ ಪ್ರಶ್ನೆಯ ಆಧಾರದ ಮೇಲೆ ಈಗಾಗಲೇ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅರ್ಹತೆ ಮತ್ತು ಆದ್ಯತೆ ಮೇಲೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಅಧ್ಯಕ್ಷರು. —ಶಿವಣ್ಣನವರೇ ತಮ್ಮ ಪ್ರಶ್ನೆಗೆ ಮಂತ್ರಿಗಳು ವೇಳೆ ಕೇಳಿದ್ದಾರೆ. ನಿಮ್ಮ ಪರವಾಗಿ ನಾನು ಅವರನ್ನು ಯಾವಾಗ ಉತ್ತರ ಕೊಡುತ್ತೀರೆಂದು ಕೇಳುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ. —ನಮ್ಮ ಕ್ಷೇತ್ರದ ಬಗ್ಗೆ ಪ್ರಶ್ನೆ ಕೇಳಿದರೆ ಯಾವಾಗಲೂ ಉತ್ತರ ಸಿಗುವುದಿಲ್ಲ ನನ್ನದು ರಿಸರ್ವ್ ಕಾನ್‌ಸ್ಟಿಟುಯೆನ್ಸಿ ಎಂದು ತಾರತಮ್ಯ ಮಾಡುತ್ತಿದ್ದೀರಾ ? ಏತಕ್ಕೆ ಉತ್ತರ ಬರುವುದಿಲ್ಲ ? ನಾವು ಆನ್‌ಟಚಬಲ್ ಆಗಿದ್ದೇವೆ, ಪ್ರಶ್ನೆ ಕಳುಹಿಸಿ ೨೦ ದಿವಸ ಆಯಿತು ಇನ್ನೂ ಉತ್ತರ ಬಂದಿಲ್ಲ.

ಶ್ರೀ ಎಂ. ಪಿ. ಪ್ರಕಾಶ್. —ಮಾನ್ಯ ಅಧ್ಯಕ್ಷರೆ ಅವರು ಈ ರೀತಿ ಆಪಾದನೆ ಮಾಡಬೇಕಾದ ಅಗತ್ಯ ಇಲ್ಲ. ವಿವರಗಳು ಬಂದಿಲ್ಲದಿರುವುದರಿಂದ ಉತ್ತರ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಸದಸ್ಯರಾದ ಶಿವಣ್ಣನವರೇ ಅಲ್ಲಿನ ತಾಲ್ಲೂಕು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಅವರಿಗೆ ಬೇಕಾಗಿರತಕ್ಕ ವಿವರಗಳು ಅವರ ಅಧೀನದಲ್ಲಿರತಕ್ಕ ತಾಲ್ಲೂಕು ಸಮಿತಿಯಲ್ಲೇ ಸಿಗುತ್ತವೆ. ಎಚ್. ಡಿ. ಕೋಟೆ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗಕ್ಕೆ ಸೇರಿದ ರಸ್ತೆಗಳಿಷ್ಟು, ಈ ರಸ್ತೆಗಳಿಗೆ ೧೯೮೭-೮೮ನೇ ಸಾಲಿಗೆ ಒದಗಿಸಲಾಗಿರುವ ಹಣವೆಷ್ಟು, ಪ್ರತಿ ರಸ್ತೆಗೆ ಒದಗಿಸಿರುವ ಹಣದ ವಿವರ ಏನು ಎಂದು ಕೇಳಿದ್ದಾರೆ. ತಾಲ್ಲೂಕು ಪಂಚಾಯಿತಿ ಸಮಿತಿಗೆ ಶಿವಣ್ಣನವರೇ ಅಧ್ಯಕ್ಷರಾಗಿದ್ದಾರೆ. ಅಲ್ಲೇ ಸಿಗತಕ್ಕ ವಿವರಗಳನ್ನು ಅಲ್ಲಿ ಕೇಳಲಾರದೆ ಇಲ್ಲಿ ಪ್ರಸ್ತಾಪ ಮಾಡುವುದು ಎಷ್ಟುಮಟ್ಟಿಗೆ ಸಾಧುವಾದುದು ಎಂಬುದನ್ನು ಅವರು ಯೋಚನೆ ಮಾಡಬೇಕು.

ಅಧ್ಯಕ್ಷರು. —ನಿಮಗೆ ಎಲ್ಲಿ ಪ್ರಶ್ನೆ ಹಾಕಬೇಕು ಎಂದು ಗೊತ್ತಿಲ್ಲ.

ಶ್ರೀ ಎಂ. ಶಿವಣ್ಣ. —ಉತ್ತರ ಏತಕ್ಕೆ ಹೇಳುವುದಿಲ್ಲ ?

ಅಧ್ಯಕ್ಷರು, —ಹೀಗೆಲ್ಲಾ ಹೇಳಿದರೆ ನೀವು ಅಲ್ಲಿ ಅಧ್ಯಕ್ಷರಾಗಿ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ನಿಮಗೆ ಮಾಹಿತಿ ಎಲ್ಲಿ ಸಿಗುತ್ತದೆ ಎಂಬುದು ಗೊತ್ತಿಲ್ಲ. ಆದರೂ ತರಿಸಿಕೊಡುತ್ತೇನೆ ಕೂತ್ಕೊಳ್ಳಿ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದ ಭೂ ಸಂರಕ್ಷಣಾ ಇಲಾಖೆಯ ಮಾಹಿತಾಂತರ ಕೈಗೊಂಡಿರುವ ಅಭಿವೃದ್ಧಿ ಯೋಜನೆ

೨೯೩೭ ಶ್ರೀ ಆರ್. ಎನ್. ನಾಯಕ್ (ಭಟ್ಕಳ್)—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದಲ್ಲಿ(ಎನ್ ಆರ್ ಇ ಪಿ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಡಿಯಲ್ಲಿ (ಭೂ ಸಾರ ಸಂರಕ್ಷಣಾ ಇಲಾಖೆ ಮಾಹಿತಾಂತರ ಕೃಷಿ ಜಮೀನು ಮಟ್ಟ) ಅಭಿವೃದ್ಧಿ ಯೋಜನೆ ಕೆಲಸಗಳನ್ನು ೧೯೮೩-೮೪, ೧೯೮೪-೮೫ ರಲ್ಲಿ ಕೈಗೆತ್ತಿಕೊಂಡಿರುವುದು ನಿಜವೇ ?

ಆ) ಸದರಿ ಯೋಜನೆಗೆ ಮಂಜೂರಾದ ಸಂಪೂರ್ಣ ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆಯೇ ?

ಇ) ಸದರಿ ಯೋಜನೆಯಡಿಯಲ್ಲಿ ಪೂರ್ಣಗೊಳಿಸಿದ ಹಾಗೂ ಪೂರ್ಣಗೊಳಿಸದಿರುವ ಕಾಮಗಾರಿಗಳೆಷ್ಟು ?

ಈ) ಸಂಪೂರ್ಣವಾಗಿ ಪೂರ್ಣಗೊಳಿಸದಿರಲು ಕಾರಣಗಳೇನು ? ಹಾಗೂ ಪೂರ್ಣಗೊಳಿಸಲು ಬೇಕಾದ ಕಾಲಾವಧಿ ಎಷ್ಟು ?

ಉ) ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ೧೯೮೩-೮೪ರಲ್ಲಿ ಭೂ ಸಂರಕ್ಷಣಾ ಇಲಾಖೆಯಂ ಮುಖಾಂತರ ಯಾವ ಕೆಲಸವನ್ನೂ ತೆಗೆದುಕೊಂಡಿರುವುದಿಲ್ಲ, ಆದಾಗ್ಯೂ, ಶಿವಮೊಗ್ಗ ಜಿಲ್ಲಾ ಶೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದಲ್ಲಿ ೧೯೮೪-೮೫ರಲ್ಲಿ ಒಂದು ಕಾಮಗಾರಿಯನ್ನು ಕೈಗೊಂಡಿರುತ್ತಾರೆ.

ಆ) ಹೌದು

ಇ) ಮಂಜೂರಾಗಿದ್ದು ಒಂದು. ಇದು ಪೂರ್ತಿಯಾಗಿರುವುದಿಲ್ಲ

ಈ) ಈ ಕಾಮಗಾರಿಯ ಅಂದಾಜು ವೆಚ್ಚ ೧೬೬೪೪.೦೦ ರೂ.ಗಳು ಅದರಲ್ಲಿ ಆಗ ಹಣದ ಕೊರತೆಯ ಪ್ರಯುಕ್ತ ೨೧೧೧-೦೦ ರೂ. ಗಳನ್ನು ಪಾತ್ರ ಖರ್ಚು ಮಾಡಿರುತ್ತದೆ. ಉಳಿದ ೧೪೫೫೩ ೦೦ರೂಗಳನ್ನು ಚಾಲ್ತಿ ಸಾಲಿನಲ್ಲಿ ಖರ್ಚು ಮಾಡಿ ಕಾಮಗಾರಿಯನ್ನು ಪೂರ್ತಿಗೊಳಿಸ ಲಾಗುವುದು

ಉ) ಇಲ್ಲ

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ೧೯೮೪-೮೫ ನೇ ಸಾಲಿನಲ್ಲಿ ಈ ಕೆಲಸ ಮಂಜೂರಾಗಿದೆ. ಉತ್ತರದಲ್ಲಿ ಸದರಿ ಯೋಜನೆಗೆ ಮಂಜೂರಾದ ಸಂಪೂರ್ಣ ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆಯೇ ಎಂಬುದಕ್ಕೆ ''ಹೌದು'' ಎಂದು ಹೇಳಿದ್ದಾರೆ, ಈ ಕಾಮಗಾರಿಯ ಅಂದಾಜು ವೆಚ್ಚ ಎಷ್ಟು ಎಂದರೆ ಕೇವಲ ೧೬,೬೪೪ ರೂಪಾಯಿಗಳು. ಇಷ್ಟು ಕಡಿಮೆ ಮೊತ್ತದ ಹಣವನ್ನು ಬಿಡುಗಡೆ ಮಾಡುವುದಕ್ಕೆ ತಡೆ ಏತಕ್ಕಾಯಿತು ? ಹಣ ಬಿಡುಗಡೆ ಮಾಡಿದ್ದರೆ ಹಣ ಏನಾಯಿತು ಎಂಬುದನ್ನು ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್.—೧೯೮೩-೮೪ ನೇ ಸಾಲಿನಲ್ಲಿ ಭೂಸಂರಕ್ಷಣಾ ಇಲಾಖೆಯಿಂದ ಈ ವಿಚಾರದಲ್ಲಿ ಹಣ ಬಿಡುಗಡೆ ಆಗಿರಲಿಲ್ಲ. ೧೯೮೪-೮೫ ನೇ ಸಾಲಿನಲ್ಲಿ ಈ ಕಾಮಗಾರಿ ಮಂಜೂರಾಗಿದೆ. ಆ ಸಂದರ್ಭದಲ್ಲಿ ಹಣ ಬಿಡುಗಡೆ ಮಾಡುವಾಗ ಕೇವಲ ೨,೧೧೧ ರೂಪಾಯಿಂಗಳನ್ನು ಬಿಡುಗಡೆ ಮಾಡ ಲಾಗಿದೆ. ೧೯೮೫-೮೬ರ ನಂತರ ಪೂರ್ತಿ ಹಣ ಬಿಡುಗಡೆ ಆಗಿದೆ. ಇದು ಸ್ವಲ್ಪ ಮೊತ್ತದ ಹಣ. ಆದ್ದರಿಂದಈ ದಿವಸವೇ ಅಧಿಕಾರಿಗಳಿಗೆ ೮ ದಿವಸದಲ್ಲಿ ಕಾಮಗಾರಿ ಮುಕ್ತಾಯ ಮಾಡಿ ಸರ್ಕಾರಕ್ಕೆ ವರದಿಯನ್ನುಕಳುಹಿಸಿಕೊಡಬೇಕು ಎಂತು, ನಾಯಕ್ ಅವರಿಗೂ ವಿಷಯ ತಿಳಿಸಬೇಕು ಎಂದು ಹೇಳಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಸದರಿ ಯೋಜನೆಗೆ ಮಂಜೂರಾದ ಸಂಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆಯೇ ಎಂದು ಕೇಳಿದ್ದರೆ ''ಮಂಜೂರು ಮಾಡಿದೆ'' ಎಂದು ಹೇಳಿದ್ದಾರೆ. ಹಾಗಾದರೆ ಕೆಲಸ ಏತಕ್ಕೆ ಆಗಿಲ್ಲ ?

ಶ್ರೀ ಎಂ.ಪಿ. ಪ್ರಕಾಶ್.—೧೯೮೪-೮೬ ರಲ್ಲಿ ಹಣ ಬಿಡುಗಡೆ ಆಗಿರಲಿಲ್ಲ. ೧೯೮೬-೮೭ರ ನಂತರ ಹಣ ಬಿಡುಗಡೆಯಾಗಿದೆ. ನೀವು ನಿರ್ದಿಷ್ಟವಾಗಿ ಪ್ರಶ್ನೆ ಕೇಳಿಲ್ಲ. ಸದರಿ ಯೋಜನೆಗೆ ಮಂಜೂರಾದ ಹಣ ಬಿಡುಗಡೆ ಮಾಡಿದೆಯೇ ಎಂದು ಕೇಳಿದ್ದೀರಿ. ಈಗ ಬಿಡುಗಡೆ ಮಾಡಿರುವುದರಿಂದ ಮಾಡಿದೆ ಎಂದು ಉತ್ತರ ಕೊಟ್ಟಿದ್ದೇವೆ. ಆದರೆ ಖರ್ಚಾಗಿರುವ ಹಣ ಎಷ್ಟು ಎಂದು ಹೇಳಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಇಷ್ಟು ಸಣ್ಣ ಮೊತ್ತಕ್ಕೆ ಇಷ್ಟು ವರ್ಷ ತೆಗೆದುಕೊಳ್ಳುತ್ತೀರಿ, ಇನ್ನು ಅಪ್ಪರ್‌ಕೃಷ್ಣ ಯೋಜನೆಯನ್ನು ಯಾವಾಗ ಮುಗಿಸುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್.—ಅದಕ್ಕೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಆರ್. ಎನ್. ನಾಯಕ್:—೧೬ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದೇ ಇರತಕ್ಕ ಸರ್ಕಾರದಲ್ಲಿ ೩೦೦ ಕೋಟಿ ರೂಪಾಯಿಗಳನ್ನು ಎಲ್ಲಿ ಖರ್ಚು ಮಾಡುತ್ತೀರಿ ? ಸುಮ್ಮನೆ ಹೇಳುತ್ತೀರಿ. ನಿಮಗೆ ಅಧಿಕಾರಿಗಳ ಮೇಲೆ ಹಿಡಿತ ಇಲ್ಲ. ಕೆಲಸ ಮಾಡಿಸುವ ಶಕ್ತಿ ಇಲ್ಲ.

ಉಪಾಧ್ಯಕ್ಷರು.—ನಾಯಕರೇ, ದಯವಿಟ್ಟು ಕೂಡ್ರಿ.

ಶ್ರೀ. ಆರ್. ಎನ್. ನಾಯಕ್.—ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಅವರಿಂದ ಕೆಲಸ ಮಾಡಿಸುವುದಕ್ಕೆ ಇವರಿಗೆ ಆಗುತ್ತಿಲ್ಲ. ೩೦೦ ಕೋಟಿ ರೂಪಾಯಿ ಕೊಟ್ಟು ಅಶ್ವರ್ ಕೃಷ್ಣ ಯೋಜನೆಯನ್ನು ಇವರು ಮುಗಿಸುವುದಿಲ್ಲ. ಸುಮ್ಮಸುಮ್ಮನೆ ಪ್ರಚಾರಕ್ಕೆ ಮಾತನಾಡುತ್ತೀರಿ.

೧೧-೩೦ ಎ. ಎಂ.

ಉಪಾಧ್ಯಕ್ಷರು.—ಪ್ರಶ್ನೋತ್ತರ ವೇಳೆಯಲ್ಲಿ ತಾವು ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಪಟಮಕ್ಕಿ ರತ್ನಾಕರ್.—ಇದು ನನ್ನ ತಾಲ್ಲೂಕಿನ ವಿಚಾರ. ಮಾನ್ಯ ಮಂತ್ರಿಗಳು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಹಣವನ್ನು ಬಿಡುಗಡೆ ಮಾಡಿದ್ದರೆ ಕೆಲಸವನ್ನೂ ಏಕೆ ತೆಗೆದು ಕೊಳ್ಳಲಿಲ್ಲವೆಂದು ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳ ಹೇಳಿಕೆ ಪರಸ್ಪರ ವಿಪರ್ಯಾಸದಿಂದ ಕೂಡಿರತಕ್ಕ ಹೇಳಿಕೆಯಾಗಿದೆ. ಅಧಿಕಾರಿಗಳನ್ನು ಇವರು ಆಕಾಶದ ಮೇಲೆ ಇಟ್ಟು ಕೊಂಡಿದ್ದಾರೆ. ಭೂಮಿಯಂ ಮೇಲೆ ಯಾವ ಅಧಿಕಾರಿಗಳೂ ಕೆಲಸ ಮಾಡುತ್ತಿಲ್ಲ.

ಶ್ರೀ ಆರ್.ಎನ್.ನಾಯಕ್.—ತಮ್ಮ ತಮ್ಮ ಸಂಬಂಧಿಕ ಅಧಿಕಾರಿಗಳನ್ನೇ ಇಟ್ಟುಕೊಂಡಿದ್ದಾರೆ.

ಉಪಾಧ್ಯಕ್ಷರು.—ದಯವಿಟ್ಟು ಕೂಡಿ.

ಶ್ರೀ ಪಟಮಕ್ಕಿ ರತ್ನಾಕರ್.—ಅಧಿಕಾರಿಗಳನ್ನು ಆಕಾಶದಿಂದ ಕೆಳಗೆ ಇಳಿಸಿ ಭೂಮಿಯ ಮೇಲೆ ಕೆಲಸ ಮಾಡುವ ಹಾಗೆ ಮಾಡಿ. ಏಕೆಂದರೆ ನಮಗೂ ಸಾಕಾಗಿ ಹೋಗಿದೆ. ಅಧಿಕಾರಿಗಳ ಬಗ್ಗೆ ಮಂತ್ರಿಗಳ ಗಮನಕ್ಕೆ ಏನೇ ತಂದರೂ ಇವರು ಅದನ್ನು ತಮ್ಮ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ ಎಲ್ಲ ನಮ್ಮ ಪರವಾಗಿ ಇದ್ದಾರೆ, ಎಲ್ಲರೂ ನಮ್ಮ ಹಿತಚಿಂತನೆಯನ್ನು ಮಾಡುತ್ತಾರೆಂದು ತಿಳಿದು ಕೊಂಡಿದ್ದಾರೆ. ಅವರೇ ಇವರಿಗೆ ಮೋಸ ಮಾಡಿರುವುದು.

ಉಪ ಸಭಾಪತಿಯವರು.—ಪ್ರಶ್ನೆ ಕೇಳಿ. ಭಾಷಣ ಬೇಡ.

ಶ್ರೀ ಎಂ.ಪಿ.ಪ್ರಕಾಶ್.—ಈ ಪ್ರಶ್ನೆಯನ್ನು ಮಾನ್ಯ ನಾಯಕ್ ರವರು ಕೇಳುತ್ತಿದ್ದಂತಹ ಸಂದರ್ಭದಲ್ಲಿ ಆ ಕ್ಷೇತ್ರದ ಶಾಸಕರಾದ ಶ್ರೀಮಾನ್ ರತ್ನಾಕರ್‌ರವರು ಆಕಾಶದಲ್ಲೇ ವಿಹರಿಸುತ್ತಿದ್ದರು. ಭೂಮಿಯ ಮೇಲೆ ಬರಲೇ ಇಲ್ಲ. ಈಗಲಾದರೂ ಅಧಿವೇಶನ ನಡೆಯುತ್ತಿರುವುದರಿಂದ ಭೂಮಿಗೆ ಬಂದಿರುವುದು ಬಹಳ ಸಂತೋಷದ ಸಂಗತಿ. ಆದರೆ ಇಲ್ಲಿ ಪ್ರಶ್ನೆ ಇತಕ್ಕಂತಹದ್ದು ೧೯೮೬-೮೭ನೇ ಸಾಲಿನದ್ದು. ನಿಮ್ಮ ಕ್ಷೇತ್ರದ ಬಗ್ಗೆ ಅವರು ಹೆಚ್ಚು ಕಾಳಜಿಯನ್ನು ವಹಿಸಿದ್ದಾರೆ.

(ಗೊಂದಲ)

ಶ್ರೀ ಆರ್.ಎನ್.ನಾಯಕ್.—ನೀವು ಈ ರೀತಿ ಹೇಳುವುದು ಬೇಡ. ನಮ್ಮಲ್ಲಿ ಒಂದು ರೀತಿ ಹೊಂದಾಣಿಕೆ ಇದೆ, ನಮಗೆ ಬೇಕಾಗಿರುವಂತಹದ್ದನ್ನು ಅವರು ಕೇಳುತ್ತಾರೆ. ಅವರಿಗೆ ಬೇಕಾಗಿರುವಂತಹದ್ದನ್ನು ನಾವು ಕೇಳುತ್ತೇವೆ. ನೀವು ಎಲ್ಲ ಹೀಗೆ..... ?

ಶ್ರೀ ಎಂ.ಪಿ.ಪ್ರಕಾಶ್.—ನೀವು ಎಲ್ಲರೂ ಹೀಗೇನೆ.

ಶ್ರೀ ಎಂ.ರಾಮಪ್ಪ.—ಪ್ರಕಾಶ್ ರವರು ಹೇಳಿದ ಮೇಲೆ ಒಂದು ವಿಚಾರವನ್ನು ಹೇಳಬೇಕಾತ್ತದೆ. ನಮ್ಮ ಜಿಲ್ಲೆಯಲ್ಲೇ ಆಗಿದೆ. ಇಂಪಾರ್ಟೆಂಟ್ ಹುದ್ದೆಗಳಾದ ಇ.ಇ.....

ಉಪ ಸಭಾಪತಿಯವರು.— ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಎಂ. ರಾಮಪ್ಪ.—ಎಲ್ಲ ಅಧಿಕಾರಿಗಳನ್ನೂ ಇವರು ಆಕಾಶದಲ್ಲೇ ಇಟ್ಟುಕೊಂಡಿದ್ದಾರೆ. ನಮ್ಮಲ್ಲಿ ೫ ಜನ ಇ. ಇ.ಗಳು ಇದ್ದಾರೆ, ಅವರೆಲ್ಲರೂ ಒಂದೇ ಜಾತಿಯವರು. ಚೀಫ್ ಸೆಕ್ರೆಟರಿಯವರೂ ಕೂಡ ಒಂದೇ ಜಾತಿಯವರು ಎಲ್ಲರೂ ಇಂತಹವರನ್ನೇ ಈ ರೀತಿಯಾಗಿ ಇಟ್ಟುಕೊಂಡರೆ...

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಕೂಡ್ರಿ. ಹೀಗಾದರೆ ಆಗುವುದಿಲ್ಲ, ದಯವಿಟ್ಟು ಕೂಡ್ರಿ.

(ಗೊಂದಲ)

ಶ್ರೀ ಎಂ. ರಾಮಪ್ಪ.—ನಿಮಗೆ ಅಧಿಕಾರಿಗಳ ಮೇಲೆ ಹಿಡಿತ ಇಲ್ಲ. ನಿಮಗೆ ನಿಮ್ಮ ಜಾತಿಯವರೇ ಬೇಕಾಗಿದೆ.

ಶ್ರೀ ಎಂ. ಪಿ. ಪ್ರಕಾಶ್.—ಯಾವ್ಯಾವ ಅಧಿಕಾರಿಗಳು ಎಲ್ಲೆಲ್ಲಿಗೆ ಬಂದಿದ್ದಾರೆ? ಯಾರ್ಯಾರ ಹೇಳಿಕೆಯ ಮೇಲೆ ಬಂದಿದ್ದಾರೆಂಬುದು ಶ್ರೀಮಾನ್ ರಾಮಪ್ಪನವರಿಗೂ ಗೊತ್ತಿದೆ. ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳ ಫುಡ್ ಅಸಿಸ್ಟೆಂಟ್ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೂ ಇವರು ಇವತ್ತು ಬಂದು ಅವರ ಬಗ್ಗೆ ಹೇಳುತ್ತಿದ್ದಾರೆ. ಅವರು ತಪ್ಪು ಮಾಡಿರಬಹುದು, ಅವರನ್ನು ವರ್ಗ ಮಾಡಿ ಅಂತ ಇವತ್ತು ಬೆಳಗ್ಗೆ ಬಂದು ಹೇಳುವುದಕ್ಕೆ ಬರುತ್ತಾರೆ. ಇಲ್ಲಿ ಸದನದಲ್ಲಿ ತಮ್ಮ ವೀರಾವೇಶವನ್ನು ಪ್ರದರ್ಶನ ಮಾಡುವುದಕ್ಕೆ ಬರುತ್ತಾರೆ. ಇವೆಲ್ಲಾ ಬೇಡ, ಇದು ಎಲ್ಲರಿಗೂ ಗೊತ್ತಿರುವ ವಿಷಯ.

ಶ್ರೀ ಎಂ. ರಾಮಪ್ಪ.—ಎಲ್ಲರೂ ನಿಮ್ಮವರೇ ಇದ್ದರು.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಯಾರು ಇದರ ಬಗ್ಗೆ ಇದ್ದಾರೆ ಎಂಬುದು ಗೊತ್ತಾಗಲಿ. ಆದರೂ ನಾನು ಆ ವಿಚಾರಕ್ಕೆ ಹೋಗದೆ ನೇರವಾಗಿ ಇರತಕ್ಕ ಪ್ರಶ್ನೆಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಎಂ. ರಾಮಪ್ಪ.—ಎಲ್ಲರೂ ನಿಮ್ಮವರೇ ಇದ್ದರು.

ಶ್ರೀ ಎಂ. ಪಿ. ಪ್ರಕಾಶ್.—ನೀವು ಏಕೆ ಬರಬೇಕಾಗಿತ್ತು ಅವರ ಜೊತೆ?

ಶ್ರೀ ಎಂ. ರಾಮಪ್ಪ.—ಯಾರು...

ಶ್ರೀ ಆರ್. ಎನ್ ನಾಯಕ್.—ಬೇಡವಾ ? ನಿಮ್ಮ ಮನೆಗೆ ನಾವು ಯಾರೂ ಬರುವುದಿಲ್ಲ. ನಿಮ್ಮ ಮನೆಗೆ ನಿಮಗೆ ಬೇಕಾದವರನ್ನೇ ಕರೆದುಕೊಳ್ಳಿ. ಈ ಸರ್ಕಾರದ ಮಂತ್ರಿಗಳೆಲ್ಲಾ ಅಧಿಕಾರಿಗಳು ಹೇಳಿದ ಹಾಗೆಯೇ ಕೇಳುತ್ತಾರೆ. ಶಾಸಕರು ಹೇಳಿದ್ದನ್ನು ಕೇಳುವುದು ಬೇಡ ಹೀಗೆ ಮಾಡಿ.

ಶ್ರೀ ಎಂ. ಪಿ. ಪ್ರಕಾಶ್.—೧೬ ಸಾವಿರ ರೂಪಾಯಿಗಳ ಈ ಕಾಮಗಾರಿಯನ್ನು...

ಉಪಾಧ್ಯಕ್ಷರು.—ಶ್ರೀ ಎಂ. ರಾಮಪ್ಪನವರು ಮಾತನಾಡಿದ್ದನ್ನು 'ಎಕ್ಸ್‌ಪಂಜ್' ಮಾಡಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್.—೧೬ ಸಾವಿರ ರೂಪಾಯಿಗಳ ಕಾಮಗಾರಿಯನ್ನು ಸರಿಯಾದ ರೀತಿಯಲ್ಲಿ...

ಶ್ರೀ ಎಂ. ರಾಮಪ್ಪ.—ನಿಮಗೆ ಯಾರು ಆ ರೀತಿ ಹೇಳಿದವರು?

ಉಪಾಧ್ಯಕ್ಷರು.—ಪ್ರಶ್ನೋತ್ತರ ವೇಳೆಯಲ್ಲಿ ಈ ರೀತಿಯಾದರೆ ಹೇಗೆ? ಬೇಡ, ದಯವಿಟ್ಟು ಕೂಡಿ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಎಕ್ಸ್‌ಪಂಜ್ ಮಾಡಬೇಕಾದರೆ ಯಾವ ರೀತಿ ಮಾಡಿದಿರಿ? ಇದು ಆಗುವುದಿಲ್ಲ.

ಉಪಾಧ್ಯಕ್ಷರು.—ಈ ರೀತಿ ನೀವು ವರ್ತನೆ ಮಾಡುವುದಕ್ಕಾಗುವುದಿಲ್ಲ. please sit down.

(ಗೊಂದಲ)

ಶ್ರೀ ಜಿ. ಎಂ. ಕಾನಡೆ —ಮಾನ್ಯ ಎಂ. ಪಿ. ಪ್ರಕಾಶ್‌ರವರು ಏನು ಹೇಳಿದರು ಎಂದರೆ, ವರ್ಗಾವಣೆಗಾಗಿ ಮನೆಯ ಹತ್ತಿರ ಶಾಸಕರು ಬರುತ್ತಾರೆ ಅಂತ. ಶಾಸಕರು ವರ್ಗಾವಣೆಯ ಬಗ್ಗೆ ಯಾಗಲಿ, ಇನ್ನಿತರೆ ವಿಷಯಗಳಲ್ಲಾಗಲೀ ಮಂತ್ರಿಗಳ ಮನೆಯ ಹತ್ತಿರ ಹೋಗಬೇಕಾಗುತ್ತದೆ. ಹೋಗಬಾರದಾ?

ಉಪಾಧ್ಯಕ್ಷರು.—ದಯವಿಟ್ಟು ಕೂಡಿ.

ಶ್ರೀ ಜಿ. ಎಂ. ಕಾನಡೆ.—ಶಾಸಕರು ಬರಬಾರದು ಅಂತ ಅಂದರೆ ಹೇಗೆ? ಬರಬಾರದು ಅಂತ ಅಂದರೆ ಬೇಡ.

MR. DEPUTY SPEAKER.—I have not permitted you Please sit down.

(ಗೊಂದಲ)

ಶ್ರೀ ಜಿ. ಎಂ. ಕಾನಡೆ.—ನಾವು ಜನರ ಪ್ರತಿನಿಧಿಗಳು. ನಾವು ಬಂದೇ ಬರುತ್ತೇವೆ.

ಉಪಾಧ್ಯಕ್ಷರು.—ನೀವು ಏನು ಹೇಳುತ್ತಿದ್ದೀರಿ?

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನಿಮ್ಮ ಮನೆಯಂ ಬಾಗಿಲಿಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರಿಗೆ ನೀಪೂ ಕೂಡಾ ಆದೇ ರೀತಿಯಾಗಿ ಬಂದಿದ್ದಿರಿ ಅಲ್ಲವೇ ಎಂದು ಹೇಳುವುದು ಕೂಡಾ ಈ ಸಂದರ್ಭದಲ್ಲಿ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ನಾವು ಕೂಡಾ ಮಂತ್ರಿಗಳಾಗಿದ್ದವರು. ಆಗಲೂ ನಮ್ಮ ಹತ್ತಿರ ಮಾನ್ಯ ದೇವೇಗೌಡರು, ಮಾನ್ಯ ಬೊಮ್ಮಾಯಿಯವರು ಇಂತಹದ್ದಕ್ಕೆ ಬಂದಿದ್ದರು ಎಂದು ಲಿಸ್ಟ್ ಇಟ್ಟುಕೊಂಡು ತೋರಿಸುವುದಕ್ಕಾಗುತ್ತದೆಯೇ ? ನೀವು ಮಂತ್ರಿಗಳಾದ ಮೇಲೆ ಎಲ್ಲರೂ ನಿಮ್ಮ ಬಳಿಗೆ ಬರುತ್ತಾರೆ. ಜನರ ನೋವುನಲಿವನ್ನು ನೀವು ಕೇಳಬೇಕಾಗುತ್ತದೆ. ಅನೇಕ ಜನ ಅಧಿಕಾರಿಗಳು ಇರುತ್ತಾರೆ, ಇವರಿಂದ ಕೆಲವರಿಗೆ ಅನ್ಯಾಯವಾಗಿದ್ದರೆ ಆ ಬಗ್ಗೆ ನಾವ್ಯು ದೊರಕಿಸಿಕೊಡಿ ಎಂದರೆ ಏನು ತಪ್ಪಾಗುತ್ತದೆ?

ಉಪಾಧ್ಯಕ್ಷರು.—ಪ್ರಶ್ನೋತ್ತರಕ್ಕೆ ಸಂಬಂಧ ಇಲ್ಲದೇ ಇರುವುದನ್ನು ಈಗ ಕೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಖರ್ಗೆಯವರು ಎತ್ತಿರತಕ್ಕ ಅಂಶಗಳ ಬಗ್ಗೆ ನನಗೆ ಸಂಪೂರ್ಣ ಗೌರವ ಇದೆ. ಇವತ್ತು ಒಬ್ಬ ಮಂತ್ರಿ ಕೇವಲ ಒಬ್ಬ ಶಾಸಕನಿಗೆ ಮಿಸಲು ಅಲ್ಲ. ಅವರಿಗೆ ಸಂಪೂರ್ಣ ಅಧಿಕಾರ ಇದೆ. ಆದರೆ ಇಲ್ಲಿ ಪ್ರಶ್ನೆ ಬಂದದ್ದು ಇಷ್ಟೇ. ಇಲ್ಲಿ ಮೂಲ ಪ್ರಶ್ನೆಗೆ ನೇರವಾಗಿ ಸಂಬಂಧ ಇಲ್ಲದ ಪ್ರಶ್ನೆಯನ್ನು ಅಂದರೆ ಒಂದೇ ಜಾತಿಯಂ ಎಕ್ಸಿಕ್ಯೂಟಿವ್ ಎಂಜಿನಿಯರ್ ರವರನ್ನು ಬಳ್ಳಾರಿಯಲ್ಲಿ ಸೇರಿಸಿಕೊಂಡಿದ್ದೀರೆಂಬ ಒಂದು ಆಪಾದನೆಯನ್ನು ರಾಮಪ್ಪನವರು ಮಾಡಿದರು. ಈ ಒಂದೇ ಜಾತಿಯಂ ಎಕ್ಸಿಕ್ಯೂಟಿವ್ ಎಂಜಿನಿಯರ್‌ಗಳನ್ನು ಬರಮಾಡಿಕೊಳ್ಳುವುದಕ್ಕೆ ಯಾರು ಯಾರು ಕಾರಣರು? ಅದಕ್ಕೆ ನನ್ನ ಕಡೆಯಿಂದ ಏನೂ ಆಗಿಲ್ಲ ಎನ್ನುವ ವಿಷಯು ಸಂಪೂರ್ಣವಾಗಿ ಮಾನ್ಯ ರಾಮಪ್ಪನವರಿಗೆ ಗೊತ್ತು. ಆದರೆ ಇಷ್ಟಾದರೂ ಕೂಡಾ ಈ ಸದನದ ಮೂಲಕ ನಾನೇ ನೇರವಾಗಿ ಇದರಲ್ಲಿ ಆಪಾದಿತ ಎನ್ನುವುದು ಜನರಿಗೆ ತಿಳಿಯಲಿ ಎನ್ನುವ ರೀತಿಯಲ್ಲಿ ಇಲ್ಲಿ ಪೂರಕವಲ್ಲದ ಪ್ರಶ್ನೆ ಕೇಳಿದ್ದಕ್ಕೆ ನಾನು ಹೇಳಿದೆ. ಈ ದಿವಸ ಬೆಳಿಗ್ಗೆ ನೀವು ಕೆಲವು ಶಾಸಕರನ್ನು ಕರೆದುಕೊಂಡು ಕನ್ಸೂಮರ್ ಕೊ-ಆಪರೇಟಿವ್ ಸೊಸೈಟಿಯಲ್ಲಿನ ಕೆಲವು ಪ್ರಕರಣಗಳಲ್ಲಿ ಫುಡ್ ಆಫಿಸ್ಟೆಂಟ್ ಒಬ್ಬರ ಬಗ್ಗೆ ಕ್ರಮ ಕೈಗೊಂಡಾಗ ಅವರನ್ನು ಟ್ರಾನ್ಸ್‌ಫರ್ ಮಾಡಿ ಏನೋ ತಪ್ಪುಗಳು ಎರಡೂ ಕಡೆ ಇರಬಹುದು ಇದರ ಬಗ್ಗೆ ಏಕೆ ಚಿಂತನೆ ಮಾಡುತ್ತೀರಿ ಎನ್ನುವ ಒಂದು ಮಾತನ್ನು ಹೇಳುವುದಕ್ಕೆ ತಾವು ಬಂದಿದ್ದಿರಿ, ಅಲ್ಲಿ ಬೇರೆ ರೀತಿ ಮಾತನಾಡುತ್ತೀರಿ. ಇಲ್ಲಿ ಸದನದಲ್ಲಿ ಬೇರೆ ರೀತಿ ಮಾತನಾಡುತ್ತೀರಿ ಎನ್ನುವ ವಿಷಯವನ್ನು ಅರಿಕೆ ಮಾಡಿಕೊಂಡೆನೇ ವಿನಃ ನಾನು ಬೇರೆ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ. ನೀವು ಅಧಿಕಾರದಲ್ಲಿ. ಇದ್ದಾಗ ನಾವು ನಿಮ್ಮ ಹತ್ತಿರ ಬರಹುದು.

ಪಂಂತ್ರಿಗಳು ಎಂದರೆ ಎಲ್ಲರ ಉಪ್ಪನ್ನು ತಿಂದಿರುವವರೇ ಆಗಿರುತ್ತಾರೆ. ನಾವು ಇದಕ್ಕೆ ಜವಾಬ್ದಾರರು ಆಗಿದ್ದೇವೆ.

ಶ್ರೀ ಎಂ. ರಾಮಪ್ಪ.—ಅವರು ನಮ್ಮ ಉಸ್ತುವಾರಿ ಪಂಂತ್ರಿಗಳು ಆಗಿರುವುದರಿಂದ ನಾನು ಅವರಿಗೆ ಹೇಳಿದ್ದೇನೆ. ನಾನು ಅವರಿಗೆ ತಮಾಷೆಯಾಗಿ ಕೂಡಾ ಒಂದು ಮಾತನ್ನು ಹೇಳಿದೆ. ನಮಗೂ ಕೂಡಾ ನೀವು ಲಿಂಗ ಕಟ್ಟಿಬಿಡಿ, ನಾವೂ ಕೂಡಾ ಅದನ್ನು ಕಟ್ಟಿಕೊಂಡು ತಿರುಗಾಡುತ್ತೇವೆ ಎಂದು ನಾನು ಅವರಿಗೆ ತಮಾಷೆಯಾಗಿ ಹೇಳಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್.—ಯಾರು ಅಧಿಕಾರಿಗಳ ವಿರುದ್ಧ ಆಪಾದನೆ ಮಾಡಿದ್ದಾರೆ ಅವರೇನೇ ಮತ್ತೆ ವರ್ಗ ಮಾಡಿ ಎಂದು ಹೇಳಿದ್ದಾರೆ.

ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಯೋಜನೆ ಬಗ್ಗೆ

೪೧೧೮. ಶ್ರೀ ಬಿ. ಉಮಾರಬ್ಬ (ವಿಟ್ಲ).— ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಕ್ಕ ಪಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫ರಿಂದ ಈಚೆಗೆ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿರುವ ಕೊಳವೆ ಬಾವಿಗಳು, ಮಿನಿ ಕುಡಿಯುವ ನೀರಿನ ಯೋಜನೆಗಳು ಹಾಗೂ ಗ್ರಾಮಾಂತರ ಪ್ರದೇಶಗಳು ನಲ್ಲಿ ನೀರಿನ ಯೋಜನೆಗಳು ಎಷ್ಟು?

ಆ) ಇದಕ್ಕೆ ತಗುಲಿದ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಇ) ಪೂರ್ಣಗೊಳಿಸಿದ ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರವು ವಿನಿಯೋಗಿಸಿದ ಮೊತ್ತವೆಷ್ಟು?

ಈ) ೧೯೮೫ರ ಹಿಂದಿನ ಮೂರು ವರ್ಷಗಳಲ್ಲಿ ಅನುಷ್ಠಾನಗೊಂಡಿರುವ ಯೋಜನೆಗಳೆಷ್ಟು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಕ್ಕ ಪಂಂತ್ರಿಗಳು).—

ಅ) ೧) ಕೊಳವೆ ಬಾವಿಗಳ ಸಂಖ್ಯೆ. ೨೩೭೭೦

೨) ಕಿರು ನೀರು ಯೋಜನೆಗಳ ಸಂಖ್ಯೆ.— ೨೪೦೩

೩) ನಲ್ಲಿ ನೀರಿನ ಯೋಜನೆಗಳ ಸಂಖ್ಯೆ.— ೯೭೮

ಆ) ರೂ. ೧೪ ೨೯೪.೪೧ ಲಕ್ಷಗಳು.

(ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ)

ಇ) ಕೇಂದ್ರ — ೫೨೯೫,೦೪ ಲಕ್ಷ ರೂ.ಗಳು.

ರಾಜ್ಯ — ೮೯೯೯.೩೭ ಲಕ್ಷ ರೂ.ಗಳು.

ಈ) ೧) ಕೈ ಪಂಪ್‌ಗಳನ್ನು ಅಳವಡಿಸುವ ಕೊಳವೆ ಬಾವಿಗಳು — ೩೮೯೦೩

೨) ನಲ್ಲಿ ನೀರು ಸರಬರಾಜು ಯೋಜನೆಗಳು— ೧,೦೪೬

೩) ಕಿರು ನೀರು ಸರಬರಾಜು ಯೋಜನೆಗಳು— ಇಲ್ಲ—